

# ಕ್ರಿಕೆಟ್‌ನ ನವತಾರೆ

ಕ್ರಿಕೆಟ್‌ನ ಬಾನಂಗಳದಲ್ಲಿ ಇದೀಗ ಹೊಸ ತಾರೆಯೊಂದರ ಉದಯವಾಗಿದೆ. ಹೈದರಾಬಾದ್‌ನ ಗಲ್ಲಿಯಲ್ಲಿ ಒಂದೊಮ್ಮೆ ಗೆಳೆಯರ ಜತೆ ಬರಿಗಾಲಿನಲ್ಲಿ ಆಡುತ್ತಿದ್ದ ಆ ತಾರೆ, ಮೊನ್ನೆ ಆಸ್ಟ್ರೇಲಿಯಾದ 'ಗಾಬಾ'ದಲ್ಲಿ ಸ್ಟೀವ್ ಸ್ಮಿತ್ ಹಾಗೂ ಮಾರ್ನಸ್ ಲಾಬೂಶೇನ್ ಅವರಂತಹ ಘಟಾನುಘಟಿಗಳನ್ನೂ ಕಾಡಿ ಪಕ್ಕನೇ ಮಿಂಚಿದ್ದಿದೆ. ಅಂದಹಾಗೆ, ಗಾಯದ ಸಮಸ್ಯೆಯಿಂದ ಬಳಲುತ್ತಾ ಕತ್ತಲಲ್ಲಿದ್ದ ಭಾರತೀಯ ಕ್ರಿಕೆಟ್ ತಂಡದಲ್ಲಿ ಹೊಳೆದು ಬೆಳಕು ಹರಿಸಿರುವ ಆ ತಾರೆಯೇ ವೇಗದ ಬೌಲರ್ ಮೊಹಮ್ಮದ್ ಸಿರಾಜ್!

ಸಿರಾಜ್ ಹೊಳೆದಿದ್ದಾದರೂ ಎಂತಹ ಸಮಯದಲ್ಲಿ? ಭಾರತ ತಂಡದಲ್ಲಿ ಅವಕಾಶ ಸಿಕ್ಕು ಅವರು ಆಸ್ಟ್ರೇಲಿಯಾ ಪ್ರವಾಸಕ್ಕೆ ಹೋಗಿದ್ದಾಗಲೇ ಅವರ ತಂದೆ ತೀರಿಹೋದ ಸುದ್ದಿ ಬಂದಿತ್ತು. ತವರಿಗೆ ವಾಪಸ್ ಹೋಗುವುದೋ ತಂಡದೊಂದಿಗೆ ಇದ್ದು ಆಡುವುದೋ – ಮುಂದಿದ್ದ ಎರಡು ಆಯ್ಕೆಗಳಲ್ಲಿ ಎರಡನೆಯದನ್ನು ಆಯ್ಕೆ ಮಾಡಿಕೊಂಡರು ಸಿರಾಜ್. ಏಕೆಂದರೆ, ಭಾರತೀಯ ತಂಡದಲ್ಲಿ ಮಗ ಆಡಬೇಕೆಂಬ ಅಪ್ಪನ ಕನಸನ್ನು ನನಸು ಮಾಡುವ ಹಂಬಲ ಅವರಲ್ಲಿತ್ತು.

'ನಮ್ಮ ತಂದೆ ಟೆಸ್ಟ್ ಕ್ರಿಕೆಟ್‌ನ ದೊಡ್ಡ ಅಭಿಮಾನಿಯಾಗಿದ್ದರು. ನನ್ನ ಸಹೋದರ ಟೆಸ್ಟ್‌ನಲ್ಲೇ ಆಡಬೇಕು ಎನ್ನುವುದು ಅವರ ಅಪೇಕ್ಷೆಯಾಗಿತ್ತು. ಅವನಿಗೆ ಅಂತಹ ಅವಕಾಶ ಕೂಡಿಬಂದಾಗಲೇ ತಂದೆ ತೀರಿಹೋಗಿದ್ದು ನಮ್ಮ ದುರ್ದೈವ. ಅವರ ಆಸೆಯನ್ನು ಈಡೇರಿಸಲು ನೀನು ಆಸ್ಟ್ರೇಲಿಯಾದಲ್ಲೇ ಉಳಿದು ಆಟವನ್ನು ಮುಂದುವರಿಸು ಎಂಬ ಸಲಹೆಯನ್ನು ಆತನಿಗೆ ನೀಡಿದ್ದೆವು...' ಸಿರಾಜ್ ಅವರ ಸಹೋದರ ಇಸ್ಮಾಯಿಲ್ ಕಣ್ಣೀರು ಸುರಿಸುತ್ತಲೇ ವಿವರಿಸುತ್ತಾರೆ.

ಆಸ್ಟ್ರೇಲಿಯಾ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಭಾರತದ ಪರ ಅತ್ಯಧಿಕ ವಿಕೆಟ್ ಪಡೆದ ದಾಖಲೆ ಬರೆದ ಸಿರಾಜ್, ಬಡ ಕುಟುಂಬಗಳ ಎಲ್ಲ ಪ್ರತಿಭೆಗಳಿಗೂ ಪ್ರೇರಣೆ ಆಗಬಲ್ಲವರು. ಅವರ ತಂದೆ ಆಟೊ ಚಾಲಕರಾಗಿದ್ದರು. ಕುಟುಂಬದ ನಿರ್ವಹಣೆಗಾಗಿ ತಾಯಿ ಕೂಡ ಮನೆಗೆಲಸಕ್ಕೆ ಹೋಗುತ್ತಿದ್ದರು. ದೈನಂದಿನದ 'ಬೇಕು–ಬೇಡ'ಗಳನ್ನೇ ನಿಭಾಯಿಸಲು ಕಷ್ಟವಾಗಿದ್ದ ಇಂತಹ ಕುಟುಂಬದಲ್ಲಿ ಅರಳಿದ ಅಪ್ಪಟ ಪ್ರತಿಭೆ ಸಿರಾಜ್.

'ನಮ್ಮೂರಿನ ಫ್ರೀ ಲ್ಯಾನ್ಸರ್ ಪ್ರದೇಶದ ಈದ್ಗಾ ಮೈದಾನದಲ್ಲಿ ಈ ಹಿಂದೆ ಬರಿಗಾಲಿನಲ್ಲಿ ಆಡುತ್ತಿದ್ದವನು ಇದೇ ಹುಡುಗನೇ' ಎಂದು ಹೈದರಾಬಾದ್ ಜನ ಮೂಗಿನ ಮೇಲೆ ಬೆರಳಿಟ್ಟುಕೊಂಡು ನೋಡುವಂತಹ ಸಾಧನೆ ಅವರದ್ದಾಗಿದೆ. ಮೆಲ್ಬರ್ನ್ ಪಂದ್ಯದ ಮೂಲಕ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿ, ಬ್ರಿಸ್ಬೇನ್ ಪಂದ್ಯದ ವೇಳೆಗೆ ತಂಡದ ಮುಂಚೂಣಿ ದಾಳಿಗಾರನಾದ ಸಿರಾಜ್ ಸಾಧನೆಯೇನು ಸುಮ್ಮನೆಯೇ ಮತ್ತೆ? ಮೂರು ಪಂದ್ಯಗಳಿಂದ 13 ವಿಕೆಟ್ ಕಿತ್ತ ಅವರು, 'ಗಾಬಾ'ದಲ್ಲಿ ಇನ್ನಿಂಗ್ಸ್‌ವೊಂದರಲ್ಲಿ ಐದು 'ಬಲಿ'ಗಳನ್ನು ಪಡೆದ ಭಾರತದ ಐದನೇ ಬೌಲರ್ ಎಂಬ ಹಿರಿಮೆಗೂ ಪಾತ್ರರಾಗಿ, ಹೈದರಾಬಾದ್ ಮಾತ್ರವಲ್ಲ, ಕ್ರಿಕೆಟ್ ಜಗತ್ತೇ ತಮ್ಮ ಕಡೆಗೆ ಅಚ್ಚರಿಯ ಕಂಗಳದಿಂದ ನೋಡುವಂತೆ ಮಾಡಿದ್ದಾರೆ. ಆಸ್ಟ್ರೇಲಿಯಾದ ಪ್ರೇಕ್ಷಕವರ್ಗ ತಮ್ಮ ವಿರುದ್ಧ ನಡೆಸಿದ ಜನಾಂಗೀಯ ನಿಂದನೆಗೆ ತಕ್ಕ ಉತ್ತರವನ್ನೂ ನೀಡಿದ್ದಾರೆ.

ಸಿರಾಜ್‌ಗೆ ಬಾಲ್ಯದಲ್ಲಿ ಯಾವ ವೃತ್ತಿಪರ ಕೋಚ್‌ನ ಮಾರ್ಗದರ್ಶನವೂ ಸಿಗಲಿಲ್ಲ. ಕ್ಯಾನ್ವಾಸ್ ಬಾಲ್ ಹಿಡಿದು ಗೆಳೆಯರ ಜತೆ ಆಡಿದ್ದಷ್ಟೇ ಬಂತು. 2017ರಲ್ಲಿ ಭಾರತದ ಟ್ವೆಂಟಿ–20 ತಂಡಕ್ಕೆ ಆಯ್ಕೆಯಾಗುವವರೆಗೆ ಅವರ ಕುಟುಂಬ ಕಡುಕಷ್ಟದಲ್ಲಿತ್ತು. ಇನ್ನು ಪ್ರತೀ ತಿಂಗಳು ಸಾವಿರಾರು ರೂಪಾಯಿ ವ್ಯಯಿಸಿ ತರಬೇತಿ ಕೊಡಿಸುವುದು ಆ ಕುಟುಂಬಕ್ಕೆ ಹೇಗೆತಾನೆ ಸಾಧ್ಯವಿತ್ತು? ಕ್ರಿಕೆಟ್‌ನಿಂದ ಹಣ ಕಾಣತೊಡಗಿದಾಗ ಈ ಕುಟುಂಬದ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತಾ ಬಂತು. ತಂದೆಗೆ ಆಟೊ ಓಡಿಸುವ ಕೆಲಸದಿಂದ ಸಿರಾಜ್ 'ನಿವೃತ್ತಿ'ಯನ್ನೂ ಕೊಡಿಸಿದರು.

'ಸಿರಾಜ್ ಸದಾ ಬ್ಯಾಟಿಂಗ್ ಮಾಡಲು ಹಂಬಲಿಸುತ್ತಿದ್ದ. ಬ್ಯಾಟ್ಸ್‌ಮನ್ ಆಗುವ ಉಮೇದು ಆತನಲ್ಲಿ ಎದ್ದು ಕಾಣುತ್ತಿತ್ತು. ಸ್ಥಳೀಯ ಟೂರ್ನಿಗಳಲ್ಲಿ ನಾವು ಟೆನಿಸ್ ಬಾಲ್‌ನೊಂದಿಗೆ ಆಡುತ್ತಿದ್ದೆವು. ಮುಂದೆ ಬೌಲಿಂಗ್‌ನಲ್ಲಿ ಆಸಕ್ತಿ ತಾಳಿದ ಸಿರಾಜ್‌ನ ಈಗಿನ ಸಾಧನೆ ಹೆಮ್ಮೆ ಮೂಡಿಸಿದೆ' ಎನ್ನುತ್ತಾರೆ ಅವರ ಬಾಲ್ಯದ ಗೆಳೆಯ ಅಮ್ಜದ್ ಖಾನ್.

ಗಲ್ಲಿ ಕ್ರಿಕೆಟ್‌ನಿಂದ ಮುಂದೆ ಕ್ಲಬ್ ಕ್ರಿಕೆಟ್‌ನತ್ತ ವಾಲಿದ ಸಿರಾಜ್‌ಗೆ ಅವಕಾಶಗಳು ಒಂದೊಂದಾಗಿ ಒಲಿದು ಬಂದವು. ಭಾರತ ತಂಡದ ಸದಸ್ಯನಾಗುವ ಅದೃಷ್ಟವೂ ಅವರಿಗೆ ಖುಲಾಯಿಸಿತು. ಹೈದರಾಬಾದ್ ತಂಡದ ಪರವಾಗಿ ರಣಜಿ ಪಂದ್ಯಗಳನ್ನು ಆಡಿರುವ ಅವರು, ಐಪಿಎಲ್‌ನಲ್ಲಿ ಸನ್‌ರೈಸರ್ಸ್ ಹಾಗೂ ರಾಯಲ್ ಚಾಲೆಂಜರ್ಸ್ ತಂಡಗಳನ್ನು ಪ್ರತಿನಿಧಿಸಿದ್ದಾರೆ. ಆಸ್ಟ್ರೇಲಿಯಾದಲ್ಲಿ ತಂಡದ ಸರಣಿ ಗೆಲುವಿಗೆ ಮಹತ್ವದ ಕಾಣಿಕೆ ನೀಡಿದ ಈ ಆಟಗಾರ ತವರಿಗೆ ಬಂದು ಇಳಿಯುತ್ತಿದ್ದಂತೆಯೇ ಮೊದಲು ಮಾಡಿದ ಕೆಲಸ ತಂದೆಯ ಸಮಾಧಿ ಸ್ಥಳಕ್ಕೆ ಭೇಟಿ ನೀಡಿದ್ದು. ತಂದೆಯ ಹೆಮ್ಮೆಯ ಮಗನಾಗಿ ಕಂಗೊಳಿಸಿದ ಅವರಿಗೆ ಇದೋ ಒಂದು 'ಬೆಸ್ಟ್ ಆಫ್ ಲಕ್' ಹಾರೈಕೆ.

■ ಪ್ರವೀಣ ಕುಲಕರ್ಣಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65